# ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ದೇಸಿ ಸಂಸ್ಕೃತಿ

**ಜ್ಯೋತಿ ಕೆ. ಎಸ್.**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೃಷ್ಣರಾಜನಗರ.

**Article Link: https://aksharasurya.com/2024/04/jyothi-k-s.php**

**DOI: https://doi.org/10.5281/zenodo.10929863**

## ABSTRACT:

ಕನ್ನಡದ ಪ್ರಸಿದ್ಧ ನಾಟಕಕಾರರಲ್ಲಿ ಚಂದ್ರಶೇಖರ ಕಂಬಾರರು ಪ್ರಮುಖರಾಗಿದ್ದಾರೆ. ಘೋಡಗೇರಿಯಲ್ಲಿ ಜನಿಸಿದ ಕಂಬಾರರು ಹಳ್ಳಿ ಬದುಕಿನ ವಿವಿಧ ಮಜಲುಗಳನ್ನು ನೋಡುತ್ತಾ ಅನುಭವಿಸುತ್ತಲೇ ಬಾಲ್ಯವನ್ನು ಕಳೆದವರು. ತಾಯಿ ಚೆನ್ನಮ್ಮ ಹಾಡುಗಾರ್ತಿಯೂ, ಕತೆಗಾರ್ತಿಯೂ ಆಗಿದ್ದರು. ಮಾವ ರಾಮಪ್ಪ ವಿಭಿನ್ನ ವ್ಯಕ್ತಿತ್ವದ ಕ್ರಿಯಾಶೀಲ ವ್ಯಕ್ತಿ. ಸುಲದಾಳದಲ್ಲಿದ್ದ ದೊಡ್ಡಮ್ಮನೂ ಅದ್ಭುತ ಕತೆಗಾರ್ತಿ. ವರ್ಷದಲ್ಲಿ ಕನಿಷ್ಠ ಮೂರು ತಿಂಗಳುಗಳ ಕಾಲ ದೊಡ್ಡಮ್ಮನೊಂದಿಗೆ ಕಳೆಯುವುದು ಕಂಬಾರರಿಗೆ ರೂಢಿಯಾಗಿತ್ತು. ಇವರೆಲ್ಲರ ಬಾಯಿಯಿಂದ ಹಾಡು ಕೇಳುವುದು, ಕತೆಕೇಳುವುದು ಕಂಬಾರರಿಗೆ ಬಹು ಮೆಚ್ಚಿನ ವಿಷಯವಾಗಿತ್ತು. ಹೀಗಾಗಿ ಬಾಲ್ಯದಲ್ಲಿಯೇ ಇವರಿಗೆ ಅಧೋಲೋಕದ ಮಾಟ, ಮಂತ್ರ, ತಂತ್ರ ವಿದ್ಯೆಗಳ ವಿಸ್ಮಯ ಪ್ರಪಂಚವೂ ಪರಿಚಯವಾಗಿತ್ತು. ಹೀಗಾಗಿಯೇ ಇವರ ನಾಟಕಗಳಲ್ಲಿ ಜನಪದ ಜಗತ್ತು ಹಾಸುಹೊಕ್ಕಾಗಿದೆ.

"ಒಬ್ಬ ಲೇಖಕ ಯಾವಾಗಲೂ ವರ್ತಮಾನದಲ್ಲೇ ನಿಂತು ಸ್ಪಂದಿಸುವುದು ಅನಿವಾರ್ಯ ಒಂದು ಕಾಲದ ಮಿತಿಯಲ್ಲಿ ಒಂದು ಪರಿಸರ, ಜನ ಹಾಗೂ ಅವರ ಮಿತಿಗಳ ನಡುವೆಯೇ ನಿಂತು ಸ್ಪಂದಿಸುತ್ತಲೇ ಆ ಕಾಲದ ಮಿತಿಯನ್ನು ಮೀರುವ ಮೌಲ್ಯಗಳನ್ನು ಹೇಳುವವ ದೊಡ್ಡ ಲೇಖಕ. ನಾನು ವರ್ತಮಾನದಲ್ಲೇ ನಿಂತು ಸ್ಪಂದಿಸುತ್ತಾ ಬಂದಿದ್ದೇನೆ. ಈ ಒಂದು ಪ್ರಕ್ರಿಯೆ ನನಗೆ ತುಂಬ ಇಷ್ಟವಾಗಿದೆ."(ಶಿ. ಕ.ನ.ಪು. 105) ಎನ್ನುವ ಕಂಬಾರರು ತಾನೊಬ್ಬ ನಾಟಕಕಾರ ಎಂಬುದನ್ನು ಒಪ್ಪುವುದಿಲ್ಲ "ನಾನು ಮುಖ್ಯವಾಗಿ ಕವಿ. ಕವಿಯಾಗಿಯೇ ನಾಟಕ ಬರೆದೆ. ನನಗೆ ಇವತ್ತಿಗೂ ನನ್ನ ಕವಿತ್ವವೇ ಮುಖ್ಯ ಅನಿಸುತ್ತದೆ." ಎನ್ನುತ್ತಾರೆ. ನಮ್ಮ ಸಾಹಿತ್ಯ ಲೋಕಕ್ಕೆ ನಿಲುಕದ ವಿಭಿನ್ನವಾದ ಜಗತ್ತು ಕಂಬಾರರದ್ದು. ಚರಿತ್ರೆಯಿಂದ ವಸ್ತುವನ್ನು ಆರಿಸಿಕೊಂಡು ವರ್ತಮಾನದ ಜೊತೆ ಮುಖಾಮುಖಿಯಾಗಿಸುವ ಪ್ರಯತ್ನವನ್ನು ಅವರು ಮಾಡಲಿಲ್ಲ. ಸಮಕಾಲೀನ ಸಂದರ್ಭವನ್ನು ಜಾನಪದದ / ದೇಸೀಯತೆಯ ಕಣ್ಣುಗಳಿಂದ ನೋಡುವುದೇ ಕಂಬಾರರ ಸಾಹಿತ್ಯದ ಉದ್ದೇಶ. ಜಾನಪದ ಶೈಲಿಯನ್ನು ಸಾಹಿತ್ಯದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಾಹಿತ್ಯಕ್ಕೆ

ಹೊಸ ಜೀವದ್ರವ್ಯವನ್ನು ತುಂಬಿದ್ದಾರೆ. ನಗರ ಪ್ರದೇಶದ ಬದುಕನ್ನು ಗ್ರಾಮೀಣ ಪ್ರದೇಶದ ಅನುಭವಗಳೊಂದಿಗೆ ಒರೆ ಹಚ್ಚುವ ಪ್ರಯತ್ನ ಕಂಬಾರರದು.

ಹಾಡು ಮತ್ತು ಕತೆಗಳು ಸೇರಿ ಕಂಬಾರರ ನಾಟಕಗಳು ಸೃಷ್ಟಿಯಾಗಿವೆ. ವಿಭಿನ್ನ ಪಾತ್ರ, ಸನ್ನಿವೇಶ, ನೆಲೆ, ಸಂಸ್ಕೃತಿಯ ಸೃಷ್ಟಿಯ ಮೂಲಕ ಕಂಬಾರರು ವಿಶ್ವದರ್ಜೆಯ ನಾಟಕಕಾರರಾಗಿದ್ದಾರೆ. ಇವರ ನಾಟಕಗಳು ಸಮುದಾಯದ ಹಿತವನ್ನು ಬಯಸುತ್ತವೆ. ಸಮಕಾಲೀನ ರಾಜಕೀಯದ ವಿಡಂಬನೆ, ಜಾತಿವಿನಾಶ, ಶ್ರಮಿಕ ವರ್ಗದ ಬಗೆಗೆ ಕಾಳಜಿ, ಮಾನವ ಪ್ರೀತಿ ಇವುಗಳ ಬಗೆಗೆ ಆಸಕ್ತಿ ವಹಿಸುತ್ತವೆ. ಹೀಗೆ ವಿವಿಧ ಮಜಲುಗಳಲ್ಲಿ ಮೂಡಿಬಂದಿರುವ ಕಂಬಾರರ ನಾಟಕಗಳಲ್ಲಿ ದೇಸೀಯತೆಗೆ ದೊರೆತಿರುವ ಪ್ರಾಮುಖ್ಯತೆಯನ್ನು ಕುರಿತು ಚರ್ಚಿಸುವುದು ಈ ಲೇಖನದ ಉದ್ದೇಶವಾಗಿದೆ.

## KEYWORDS:

ಜನಪದ, ದೇಸೀಯತೆ, ಗ್ರಾಮೀಣ ಸೊಗಡು. ಜೋಕುಮಾರಸ್ವಾಮಿ, ಮಹಾಮಾಯಿ, ಹುಲಿಯನೆರಳು.

'ದೇಸಿ' ಪದಕ್ಕಿರುವ ಸಾಮಾನ್ಯ ಅರ್ಥ 'ಚೆಲುವು'. ಸಾಹಿತ್ಯದಲ್ಲಿ ಮಾರ್ಗ ಮತ್ತು ದೇಸಿ ಎಂಬ ಎರಡು ಬಗೆಗಳಿದ್ದುದನ್ನು ನಮ್ಮ ಪ್ರಾಚೀನ ಗ್ರಂಥಗಳು ತಿಳಿಸುತ್ತವೆ. 'ದೇಸಿ'ಯನ್ನು ಕನ್ನಡದ ಒಂದು ವಿಶಿಷ್ಟ ಲಕ್ಷಣವನ್ನಾಗಿ ಬಹು ಹಿಂದಿನಿಂದಲೂ ಗುರುತಿಸಲಾಗಿದೆ. ದೇಸಿ ಜನಪದೀಯ ಅಂಶಗಳನ್ನು ಒಳಗೊಂಡ ಜನರ ಆಡು ಮಾತಿಗೆ ಹತ್ತಿರವಾದ ಸರಳವಾದ ಭಾಷಾ ಶೈಲಿ/ಸಾಹಿತ್ಯಶೈಲಿ. ಹಾಗಾಗಿ ಜನಪದ ಮತ್ತು ದೇಸಿಯ ಸಂಬಂಧ ಅನ್ಯೋನ್ಯವಾದುದು. ಭಾಷೆ, ಶೈಲಿ, ರೀತಿಗಳಲ್ಲಿ ಒಂದನೊಂದು ಅವಲಂಭಿಸಿವೆ. ಪ್ರಾಚೀನ ಕಾಲದಿಂದಲೂ ಹಲವು ಕವಿಗಳು 'ದೇಸಿ'ಯನ್ನು ತಮ್ಮ ಕೃತಿಗಳಲ್ಲಿ/ಬರವಣಿಗೆಗಳಲ್ಲಿ ಬಳಸಿಕೊಂಡು ಜನ ರಿಂದ ಮೆಚ್ಚುಗೆ ಪಡೆದಿದ್ದಾರೆ. ಯಾವುದೇ ಆಡಂಬರವಿಲ್ಲದ, ಕೃತಕತೆ ಇಲ್ಲದ, ಸರಳವೂ, ನೇರವೂ ಆದ ಈ ಸಾಹಿತ್ಯ ಪ್ರಕಾರ ಜನಪದಕ್ಕೆ ಹೆಚ್ಚು ಋಣಿಯಾಗಿದೆ. ದೇಸೀಯತೆ ಎಂಬುದು ಜಾಗತೀಕರಣದ ವಿರೋಧಿಯಾದುದು. ದೇಸೀಯತೆಯಲ್ಲಿ ಲೇಖಕ ತಾನು ಹುಟ್ಟಿಬಂದ ಸಂಸ್ಕೃತಿಯೊಂದಿಗೆ ತನ್ನನ್ನು ಗುರುತಿಸಿಕೊಳ್ಳುವ ಉದ್ದೇಶ ಹೊಂದಿರುತ್ತಾನೆ. ದೇಸೀಯತೆ ತನ್ನ ಸಾಂಪ್ರದಾಯಿಕ ಕುರುಹು ಹಾಗು ರೂಪಗಳನ್ನು ಉಳಿಸಿಕೊಂಡು ಆಧುನಿಕತೆಯೆಡೆಗೆ ಸಾಗಲು ಪ್ರಯತ್ನಿಸುತ್ತದೆ. ತನ್ನ ಅಸ್ಥಿತ್ವದ ಉಳಿವಿಗಾಗಿ ಹೋರಾಡುತ್ತದೆ. ದೇಸೀಯ ಚಿಂತನೆಯ ನೆಲೆಗಳನ್ನು

ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಸಾಂಸ್ಕೃತಿಕ ಶ್ರೀಮಂತಿಕೆಯ ದಾಖಲೆ ದೇಸೀಯತೆ ಎನ್ನಬಹುದು. ಜೀವನದ ಸಹಜ ಮೌಲ್ಯಗಳನ್ನು ದೇಸಿ ಸಾಹಿತ್ಯ ಪ್ರತಿಪಾದಿಸುತ್ತದೆ.

ಕಂಬಾರರು ಗ್ರಾಮ್ಯ ಜೀವನದ ವಸ್ತುವನ್ನು ಆಯ್ದುಕೊಂಡು ತಮ್ಮ ಬರವಣಿಗೆಯಲ್ಲಿ ಜಾನಪದ ಸತ್ವವನ್ನು ತುಂಬಿ ಪಸರಿಸಿದ್ದಾರೆ. ಹಾಗಾಗಿ ಕಂಬಾರರ ನಾಟಕಗಳ ಬೇರಿರುವುದು ಜಾನಪದದಲ್ಲಿ ಎಂದು ಹೇಳಲಾಗುತ್ತದೆ. ಹಾಡು, ಕುಣಿತ, ಸಂಗೀತ, ಆಚರಣೆ ಇತ್ಯಾದಿ ಇವರ ನಾಟಕಗಳ ಸಾಮಾನ್ಯ ಲಕ್ಷಣ. ಕಂಬಾರರ ಪ್ರಕಾರ ಶಿವಾಪುರ ಪ್ರಪಂಚದ ಮೊತ್ತಮೊದಲ ಊರು. ಕಂಬಾರರ ಹೆಚ್ಚಿನ ಬರಹಗಳು ಪ್ರಾರಂಭವಾಗುವುದು ಶಿವಾಪುರದಿಂದಲೆ. ಒಬ್ಬ ಬರಹಗಾರ ತನ್ನ ಜೀವನದ ಅನುಭವವನ್ನು ಅಗತ್ಯಕ್ಕೆ ಅನುಗುಣವಾಗಿ ಕೃತಿಯ ವಸ್ತು, ಸಂದರ್ಭಕ್ಕೆ ತಕ್ಕ ಹಾಗೆ ಸಂಯೋಜಿಸಿ ಕೃತಿಗೆ ಒಂದು ಶರೀರವನ್ನು ನೀಡಿ ಓದುಗರ ಮುಂದೆ ಇಡುತ್ತಾನೆ. ಇದು ಬಹಳ ಮಹತ್ವದ ಕೆಲಸವಾಗಿದೆ. ಈ ಅನುಭವವನ್ನು ಅಗತ್ಯಕ್ಕೆ ತಕ್ಕ ಹಾಗೆ ಜೋಡಿಸುವಲ್ಲಿ ತಂತ್ರ ಪ್ರಮುಖ ಪಾತ್ರ ವಹಿಸುತ್ತದೆ. ಕಾಲ, ವ್ಯಕ್ತಿ, ವಸ್ತುವಿಗೆ ತಕ್ಕಹಾಗೆ ತಂತ್ರದಲ್ಲಿಯೂ ಬದಲಾವಣೆಯಾಗುತ್ತಿರುತ್ತದೆ. ಕೃತಿಯೊಂದರಲ್ಲಿ ಬಳಕೆಗೊಳ್ಳುವ ತಂತ್ರವು ಆಯಾ ಕಾಲದ ಸಾಮಾಜಿಕ, ರಾಜ ಕೀಯ ಒತ್ತಡಗಳಿಂದ ಪ್ರೇರೇಪಿತವಾಗಿರುತ್ತದೆ. ದೇಶ ವಿದೇಶಗಳನ್ನು ಸುತ್ತಿ ಕೆಲವು ವರ್ಷಗಳನ್ನು ವಿದೇಶದಲ್ಲಿ ಕಳೆದು ಬಂದ ಕಂಬಾರರು ಪಾಶ್ಚಾತ್ಯ ದೇಶಗಳ ಸಂಸ್ಕೃತಿ, ಪ್ರಭಾವಗಳ ಬಗೆಗೆ ಬರೆಯದೆ, ಅಲ್ಲಿಯ ವಿಶೇಷತೆಗಳನ್ನು ಕುರಿತು ಚರ್ಚಿಸದೆ, ತಾಯ್ನಾಡಿನ ದೇಸಿ ಸಂಸ್ಕೃತಿಯ ಬಗೆಗೇ ಆಸಕ್ತಿ ತಳೆದು ಬರಹಕ್ಕೆ ತೊಡಗಿದವರು. ಕಂಬಾರರು ಎಲ್ಲೇ ಇದ್ದರೂ ಅಲ್ಲಿ ಒಂದು ಶಿವಪುರ ಅಥವಾ ಘೋಡಗೇರಿ ಕಾಣಿಸಿಕೊಳ್ಳುತ್ತದೆ. ಕಂಬಾರರಿಗೆ ನೆಲದ ನೆನಪು ಕಾಡುವ ಪ್ರೇಮದಂತೆ ಎಂಬ ಮಾತುಗಳು ಕಂಬಾರರ ಸಾಹಿತ್ಯದ ಕುರಿತು ಮಾತಾಡುವ ಹಲವು ವಿಮರ್ಶಕರ ಅಭಿಪ್ರಾಯ.

ಕುತೂಹಲ ವಿಸ್ಮಯಗಳನ್ನು ಸೃಷ್ಟಿಸುವುದು ದೇಸೀಯ ಕಲೆ. ಇಂತಹ ಕಲೆಯ ಮೂಲಕ ವಿಸ್ಮಯ ಜಗತ್ತನ್ನು ಸೃಷ್ಟಿಸುವ ಶಕ್ತಿ ಕಂಬಾರರಿಗೆ ಅದ್ಭುತವಾಗಿ ಒಲಿದಿದೆ. ಈ ವಿಸ್ಮಯಕಾರಿ ಜಗತ್ತು ಹಾಗೂ ವಾಸ್ತವ ಜಗತ್ತನ್ನು ಒಟ್ಟಾಗಿಯೇ ನೋಡುವ ಮನಸ್ಥಿತಿ ಓದುಗನಲ್ಲಿ ಇರಬೇಕಾಗುತ್ತದೆ. ಕಂಬಾರರ ಸಾಹಿತ್ಯಕ್ಕೆ ವಸ್ತು, ಪ್ರೇರಣೆ ಅವರು ಹುಟ್ಟಿ ಬೆಳೆದ ಪರಿಸರದಿಂದಲೇ ದೊರೆತುದಾದರು ಅದು ಆ ಪರಿಸರಕ್ಕೆ, ಜನಕ್ಕೆ ಮಾತ್ರ ಸೀಮಿತವಾಗದೆ ಇಡೀ ದೇಶದ ಬದುಕಿನ ಚಿತ್ರಣವನ್ನು ನೀಡಬಲ್ಲ ಶಕ್ತಿಯನ್ನು ಒಳಗೊಂಡಿರುತ್ತದೆ. ಕಂಬಾರರ ಗ್ರಾಮೀಣ ಸೊಗಡಿನ ಜಾನಪದ ವಸ್ತು, ನಿರೂಪಣೆ, ಹಾಡು, ಕುಣಿತ ನೋಡುಗರನ್ನು ಓದುಗರನ್ನು ಮೂಕ

ವಿಸ್ಮಿತರನ್ನಾಗಿಸಿದೆ. ಜಾನಪದ ಹಾಗೂ ಪ್ರಾದೇಶಿಕ ಸೊಗಡು, ಹಳ್ಳಿಗಾಡಿನ ದಟ್ಟ ಅನುಭವ, ಕೂಡುಕುಟುಂಬಗಳ(ಅವಿಭಕ್ತ ಕುಟುಂಬಗಳ) ಭಾಂದವ್ಯ, ಗ್ರಾಮೀಣ ಸಂಸ್ಕೃತಿ ಇವೆಲ್ಲವೂ ಅವರ ಸಾಹಿತ್ಯದ ಹೆಜ್ಜೆ ಗುರುತುಗಳು. ಘೋಡಗೇರಿಯ ಪರಿಸರದಲ್ಲಿದ್ದ ಪ್ರೀತಿ, ದ್ವೇಷ, ಕೊಲೆ, ಬಡತನ, ಉದಾರತೆಗಳ, ಸೌಹಾರ್ದತೆಗಳ ನಡುವೆಯೂ ಜೀವಸೆಲೆ ಹೊಂದಿದ ಆ ಹಳ್ಳಿಯಲ್ಲಿ ಹುಟ್ಟಿ ಬೆಳೆದ ಜೀವನಾನುಭವಗಳು ಕಂಬಾರರ ಕೃತಿಗಳಲ್ಲಿ ಮೇಳೈಸಿವೆ. ಅಲ್ಲದೆ ಪ್ರತಿ ವರ್ಷ ಅವರ ಆ ಹಳ್ಳಿಗೆ ಬರುತ್ತಿದ್ದ ಮೇಳಗಳು, ಕಂಪೆನಿಗಳು ಕಂಬಾರರ ಮೇಲೆ ಪ್ರಭಾವ ಬೀರಿವೆ. ತಮ್ಮ ಸಾಹಿತ್ಯದಲ್ಲಿ ಕಂಬಾರರು ಮೂಲ ಸೊಗಡಿಗೆ ಬೆಲೆಕೊಟ್ಟವರು. ಆದ್ದರಿಂದ ಅವರ ಸಾಹಿತ್ಯ ನೆಲದ ಫಲದ ಸಂಕೇತ. ಮಣ್ಣಿನ ವಾಸನೆಯನ್ನು ಹೊಮ್ಮಿಸುವಂತದ್ದು. ಉತ್ತರ ಕರ್ನಾಟಕದ ಊಳಿಗ ಮಾನ್ಯ ವ್ಯವಸ್ಥೆಯ ರೂಪುರೇಷೆಗಳಿಗೆ ವೈಚಾರಿಕ ಚಿಂತನೆಯ ಹೊಳಪು ನೀಡಿ ನಾಟಕಗಳನ್ನು ಸೃಷ್ಟಿಸಿದ್ದಾರೆ. ಅವರ ನಾಟಕಗಳು ಉತ್ತರ ಕರ್ನಾಟಕದ ಬದುಕಿನ ಮಾದರಿಯಿಂದ ಆರಂಭಗೊಂಡು ಭಾರತದ ಹಳ್ಳಿಗಳಲ್ಲಿ ಇರುವ ನೋವು–ನಲಿವು ಸಂಕಷ್ಟಗಳೊಂದಿಗೆ ತೆರೆದುಕೊಳ್ಳುತ್ತವೆ. ಬಯಲಾಟದಂತ ದೇಸಿ ಪರಂಪರೆಯನ್ನು ಮೂಲವಾಗಿಸಿಕೊಂಡು ಸಮಕಾಲೀನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದರು. (ಜೋಕುಮಾರಸಾಮ್ವಿ, ಸಂಗ್ಯಾಬಾಳ್ಯ, ಋಷ್ಯಶೃಂಗ ಹುಲಿಯ ನೆರಳು ಮುಂತಾದವು) ಕಬ್ಬಿಣ ಕಾಯಿಸುವವರೂ ಕಾವ್ಯಬರೆಯಲು ಹೊರಟಿದ್ದಾರೆ ಎಂದು ಬೇಂದ್ರೆಯವರಿಂದ ವ್ಯಂಗ್ಯಕ್ಕೆ ಒಳಗಾಗಿದ್ದ ಕಂಬಾರರು ದೇಸಿ ಸತ್ವವನ್ನು ಬೇಂದ್ರೆಯವರಿಗಿಂತಲೂ ವಿಭಿನ್ನವಾಗಿ ಮತ್ತು ಸಮರ್ಥವಾಗಿ ಸಾಹಿತ್ಯದಲ್ಲಿ ತಂದವರೆಂದು ವಿಮರ್ಶಕರಿಂದ ಹೊಗಳಲ್ಪಟ್ಟರು. ಶ್ರಮಸಂಸ್ಕೃತಿ ಕಂಬಾರರಲ್ಲಿ ಸದಾ ಜಾಗೃತವಾಗಿರುವ ಪ್ರಜ್ಞೆ, ಹಾಗಾಗಿ ಅವರಿಗೆ ಎಲ್ಲಾ ಪಾತ್ರಗಳು ಒಂದೇ ಯಾವುದೇ ತರತಮ ಭಾವವಿಲ್ಲ. ಮನಸ್ಸಿನಲ್ಲಿ ಎಷ್ಟೇ ದ್ವೇಷವಿದ್ದರೂ ಸಂಕಷ್ಟದ ಪರಿಸ್ಥಿತಿಯಲ್ಲಿ ಮರುಗುವ ಕಷ್ಟಕ್ಕೆ ಒದಗುವ ಪಾತ್ರಗಳು ಕಂಬಾರರಲ್ಲಿ ಹೇರಳವಾಗಿ ದೊರೆಯುತ್ತವೆ. ಇವು ನಮ್ಮ ಗ್ರಾಮ್ಯ ಬದುಕಿನ ಸಹಬಾಳ್ವೆಯ ಪ್ರತೀಕಗಳು. ಆಧುನಿಕತೆ/ಪಾಶ್ಚಾತ್ಯ ಪ್ರಭಾವಗಳು ಇಂತಹ ಬದುಕನ್ನು ಮರೆಯಾಗಿಸುತ್ತಿವೆ. ಗ್ರಾಮೀಣ ಬದುಕಿನ ಕೃಷಿ ಸಂಸ್ಕೃತಿಯಲ್ಲಿ ಬೇರು ಬಿಟ್ಟಿದ್ದ ಊಳಿಗಮಾನ್ಯ ಪದ್ಧತಿಯಂತಹ ಅನಿಷ್ಟ ಪದ್ಧತಿಗಳನ್ನು ವಿರೋಧಿಸುವ ಸಲುವಾಗಿಯೇ ಅವರ ನಾಟಕಗಳಲ್ಲಿ ಉರಿನಿಂಗ, ಗುರ್ಯಾ, ಬಸಣ್ಣನಂತ ಪಾತ್ರಗಳಿಗೆ ಜೀವತುಂಬಿದರು. ತುಕ್ರ ಮೇಲ್ನೋಟಕ್ಕೆ ವಿಚಿತ್ರ ವ್ಯಕ್ತಿ ಎನಿಸಿದರೂ ಅಂತರಂಗದಲ್ಲಿ ಸಂಭಾವಿತ. ಪ್ರಾಮಾಣಿಕ ಸಾಯುವಾಗ ಋಣಮುಕ್ತನಾಗಿ ಸಾಯಲು ಹಂಬಲಿಸಿ ಕೊಟ್ಟ ಮಾತನ್ನು ಉಳಿಸಿಕೊಂಡೆನೆಂದು ಸಂತಸ ಪಡುತ್ತಾನೆ. ನುಡಿದಂತೆ ನಡೆಯುವ ಬದುಕನ್ನು

ಗ್ರಾಮ್ಯರಲ್ಲೇ ಕಾಣಲು ಸಾಧ್ಯ. ಕಂಬಾರರಿಗೆ ಋಷ್ಯಶೃಂಗ ಮಳೆ ತರುವ ನಾಯಕ. "ಅವನತಿಗೆ ಕಾರಣವಾದ ದುಷ್ಟಶಕ್ತಿಯ ಎದುರು ಊರವರು ಅಸಹಾಯಕರಾಗಿ ತಮ್ಮ ಬಿಡುಗಡೆಗೆ ಉದ್ಧಾರಕನ ಬರವನ್ನು ಹಾರೈಸುವ ಚಿತ್ರ ನಮ್ಮ ಭಾರತೀಯ ರಿಗಿರುವ ಅವತಾರದ ನಂಬಿಕೆಯನ್ನು ಸಂಕೇತಿಸುವಂತಿದೆ."[1] "ದೇಸೀ ಜ್ಞಾನ, ಪರಂಪರೆಗಳ ಬಗ್ಗೆ ಮಾತನಾಡಲು ಆಧುನಿಕ ಭಾಷೆಯೊಂದನ್ನು ಬಳಸುವುದು ಯಾವ ರೀತಿಯಿಂದಲೂ ಯೋಗ್ಯವಲ್ಲ[2] ದೇಸೀ ಸಂಸ್ಕೃತಿಯನ್ನು ಅರ್ಥವಿಸಲು ಬೇಕಾದ ಭಾಷಾ ಪರಿಕರಗಳು ನಮ್ಮಲ್ಲೇ ಇದ್ದು ಅವು ಗುಣಾತ್ಮಕವೂ, ಶಕ್ತಿಯುತವೂ ಆಗಿವೆ. ಇವುಗಳು ಸಾಧಿಸುವ ಸೂಕ್ಷ್ಮ ಸಂವೇದನೆ ಸೃಜನಾತ್ಮಕ ಸಾಮರ್ಥ್ಯ, ಗಡಸುತನ ಇವುಗಳನ್ನು ಹಿಡಿದಿಡಲು ಯಾಂತ್ರೀಕೃತ ವಸಾಹತು ಭಾಷೆಯಿಂದ ಸಾಧ್ಯವಾಗುವುದಿಲ್ಲ. ಕಂಬಾರರ ನಾಟಕಗಳು ಇಂದು ಬಹುಮುಖ್ಯ ಸಾಂಸ್ಕೃತಿಕ ರೂಪಗಳಾಗಿ ಗುರುತಿಸಲ್ಪಟ್ಟಿರುವುದು ಅವರು ಬಳಸಿರುವ ಭಾಷೆಯಿಂದಾಗಿಯೇ ಎಂದರೆ ಇಂದಿನ ಕನ್ನಡ ಸಂಸ್ಕೃತಿಯ ರೂಪವನ್ನು ಈ ನಾಟಕಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು, ವಿಮರ್ಶೆಗೆ ಒಳಪಡಿಸುವುದು ಸಾಧ್ಯವಿದೆ. ಕಂಬಾರರ ನಾಟಕಗಳು ಆಧುನಿಕತೆಯ ನಿಲುವನ್ನು ಒಳಗೊಂಡಿರುವಂತವು ಅಂದರೆ ಅವು ಆಧುನಿಕತೆಯ ದಾರಿಯಲ್ಲಿ ಸಾಗುತ್ತವೆ. ಅಲ್ಲಿಯ ಕೆಲವು ಅಂಶಗಳನ್ನು ಪ್ರಶ್ನಿಸುತ್ತಾ, ಚರ್ಚೆಗೆ ಒಳಪಡುವ ರಚನೆಗಳಾಗಿವೆ. ಆಧುನಿಕತೆಯನ್ನು ನಾವು ಹೇಗೆ ಯಾವ ರೂಪದಲ್ಲಿ ಸ್ವೀಕರಿಸಬೇಕು, ಸ್ವಾಗತಿಸಬೇಕು ಎಂಬ ಸಮಸ್ಯೆ ಎಲ್ಲ ಲೇಖಕರನ್ನು ಚಿಂತೆನೆಗೆ ಹಚ್ಚಿದೆ. ಒಬ್ಬೊಬ್ಬರು ಒಂದೊಂದು ಸ್ವರೂಪದಲ್ಲಿ ಅದನ್ನು ಎದುರುಗೊಂಡಿದ್ದಾರೆ, ವಿರೋಧಿಸಿದ್ದಾರೆ, ಬರಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ಇದಕ್ಕೆ ಕಾರಣ ಪ್ರಗತಿಯ ಆಕಾಂಕ್ಷೆ ಆದರೆ ಈ ಪ್ರಗತಿ ನಮ್ಮ ದೇಸೀಯ ಮೌಲ್ಯಗಳನ್ನು, ವೈವಿಧ್ಯಗಳನ್ನು ನಾಶಮಾಡಬಾರದು ಎಂಬ ಪ್ರಜ್ಞೆಯೂ ಗಾಢವಾಗಿದೆ.

ಕಂಬಾರರ ನಾಟಕಗಳಲ್ಲಿ ಜಾನಪದ, ದೇಸೀಯತೆಗಳು ಬರಿ ತಂತ್ರಮಾತ್ರವಾಗಿ ಬರುವುದಿಲ್ಲ. ಆಧುನಿಕತೆಯನ್ನು ಎದುರುಗೊಳ್ಳುವ ರೂಪಗಳಾಗಿ ಕಂಡುಬರುತ್ತವೆ. ಕಿ.ರಂ. ನಾಗರಾಜು ಅವರು ಇದನ್ನು ಮತ್ತಷ್ಟು ಸ್ಪಷ್ಟವಾಗಿ ಹೀಗೆ ಹೇಳುತ್ತಾರೆ. "ಕಂಬಾರರ ಕವಿತೆಗಳಲ್ಲಿ, ನಾಟಕಗಳಲ್ಲಿ ನಾವು ಕಾಣುವ ಜಾನಪದೀಯತೆ ಒಂದು ತಂತ್ರ ಮಾತ್ರ ಅಲ್ಲ ಈ ಜಾನಪದೀಯತೆ (ದೇಸೀತನ) ನಮ್ಮ ಸಂಸ್ಕೃತಿಯ ಪ್ರಾಣ, ಸತ್ವಗಳ ಮಂಡನೆಗೆ, ಸಂಸ್ಕೃತಿಯ ಮುಖಾಮುಖಿ ಹಾಗೂ ಸಂಘರ್ಷಗಳ ಕ್ರಿಯಾಶೀಲ ಅಭಿವ್ಯಕ್ತಿಯ ಭಾಗವಾಗಿ ಪ್ರಕಟಗೊಳ್ಳುವುದು ಅದರ ಗುರಿಯಾಗಿದೆ. ವೈಯಕ್ತಿಕ ಹಾಗೂ ಸಾಮುದಾಯಿಕ ಅನುಭವಗಳನ್ನು ಕ್ರಿಯಾಚರಣೆಗಳನ್ನು ರೂಪಕಗೊಳಿಸಿ ಶೋಧಕ್ಕೆ ಒಡ್ಡುವ ಕಂಬಾರರ ಕ್ರಮ ಅವರ

ಸೃಷ್ಟಿಶೀಲತೆಯ ವಿಕಾಸದ ಮುಖ್ಯ ಮಜಲುಗಳಲ್ಲಿ ಒಂದಾಗಿದೆ."[3] ಆಧುನಿಕತೆ ಸಂಪೂರ್ಣ ಫಲಪ್ರದವಾದುದಲ್ಲ ಎಂಬ ನಿಲುವನ್ನು ಕಂಬಾರರ ನಾಟಕಗಳು ವ್ಯಕ್ತಪಡಿಸುತ್ತವೆ. ನಮ್ಮ ಸಮಾಜಕ್ಕೆ ಆಧುನಿಕತೆ ನೀಡಿದ ಕೊಡುಗೆ ಏನು ಎಂಬ ಜಿಜ್ಞಾಸೆ ಕಂಬಾರರನ್ನು ಸದಾ ಕಾಡುವ ಪ್ರಶ್ನೆಯಾಗಿದೆ. ಗ್ರಾಮ್ಯ ಬದುಕಿಗೆ ನಾಗರೀಕತೆಯ ಆಗಮನವಾದ ನಂತರ ಅಲ್ಲಿಯ ಜನಜೀವನದಲ್ಲಿ ಉಂಟಾದ ತಳಮಳ ಆತಂಕಗಳನ್ನು ಅನಾವರಣ ಮಾಡುವುದು ಕಂಬಾರರ ಬಹುಮುಖ್ಯ ಉದ್ದೇಶ. ಅವರ ಅಭಿವ್ಯಕ್ತಿಯ ಶೈಲಿ ಮನಮುಟ್ಟುವಂತದ್ದು. ನಮ್ಮ ಗ್ರಾಮೀಣ ಬದುಕು ಹೇಗೆ ಆಧುನಿಕತೆಯ ಸುಳಿಗೆ ಸಿಕ್ಕಿಕೊಂಡು ಬಲಿಯಾಗುತ್ತಿದೆ ಎನ್ನುವುದನ್ನು ಅವರ ಜೋಕುಮಾರಸ್ವಾಮಿಯಲ್ಲಿ ಗುರುತಿಸಬಹುದು. ಬಯಲಾಟದ ತಂತ್ರಗಳನ್ನು ಬಳಸಿ ಜೋಕುಮಾರಸ್ವಾಮಿಯನ್ನು ರಚಿಸಿದರು. ಉತ್ತರ ಕರ್ನಾಟಕದ ಜನಪದ ಭಾಷೆಯನ್ನು ಸಮೃದ್ಧವಾಗಿ ಬಳಸಿದರು. ಬಯಲಾಟದ ರಚನಾ ವಿನ್ಯಾಸವನ್ನು ಒಳಗೊಂಡಿರುವ ಈ ನಾಟಕ ಜನಪದೀಯ ಅಂಶಗಳಿಂದಾಗಿಯೇ ಹಳ್ಳಿಗಳಲ್ಲಿ ಹಳ್ಳಿಗರಿಂದಲೇ ಅಭಿನಯಿಸಲ್ಪಡುತ್ತಿತ್ತೆಂದು ಹೆಸರು ಗಳಿಸಿದೆ. ಇದು ಜನಪದ ನಂಬಿಕೆ ಮತ್ತು ಆಚರಣೆಗಳ ಪ್ರಭಾವದಿಂದ ಬಂದುದಾಗಿದೆ. ಜೋಕುಮಾರಸ್ವಾಮಿಯ ಪೂಜೆಯ ನಂಬಿಕೆ, ಗ್ರಾಮ್ಯ ಪರಿಸರದ ಕತೆಗಳು ನಾಟಕಕ್ಕೆ ಜಾನಪದ ಸತ್ವ ನೀಡಿವೆ. ಜೋಕುಮಾರಸ್ವಾಮಿಯ ಆಚರಣೆ ಸಮೃದ್ಧಿ ಹಾಗೂ ಸಂವರ್ಧನೆಯ ಸಂಕೇತವೂ ಹೌದು. ಜೋಕುಮಾರಸ್ವಾಮಿ ಆಚರಣೆಯನ್ನು ಒಳಗೊಂಡ ನಾಯಕ. ಈತ ಶ್ರಮ ಸಂಸ್ಕೃತಿಯ ಒಡೆಯ (ಬೇಸಾಯ). "ಕಂಬಾರರ ಜೋಕುಮಾರಸ್ವಾಮಿಯಂತ ನಾಟಕದ ಗ್ರಾಮ್ಯ ಸತ್ವವಿರುವುದು ಅಲ್ಲಿನ ಮಾತು ಮತ್ತು ಕ್ರಿಯೆಯಲ್ಲಿರುವ ಶೃಂಗಾರ ಮನೋರಂಜನೆಯಲ್ಲಿ."[4] ಆಧುನಿಕತೆಯ ಸಂಕೇತವಾದ ಕೋವಿ ಊರೊಳಗೆ ಪ್ರವೇಶಿಸಿದೆ ಅಸಹಾಯಕ ಜನ ಕೋವಿಯನ್ನೇ ಸ್ವಾಮಿಯೆಂದು ನಂಬುವಂತಾಗಿದೆ. ಗೌಡ ಕ್ರೂರಿಯಾಗಿದ್ದಾನೆ, ನಿರ್ವಿರ್ಯನಾಗಿದ್ದಾನೆ. ಅಂದರೆ ಹಿಂದೆ ಇದ್ದ ಗೌಡನ ಗತ್ತು ಗಾಂಭೀರ್ಯ ಇವನಿಗಿಲ್ಲ ಈತ ವೇಷದಾರಿಯಾಗಿದ್ದಾನೆ. ಕಂಬಾರರ ನಾಟಕಗಳಲ್ಲಿ ಬರುವ ಎಲ್ಲ ಪಾಳೇಗಾರಿ ನಾಯಕರು (ಗೌಡ್ರು) ಷಂಡರಾಗಿರುತ್ತಾರೆ. ಇಡೀ ಗ್ರಾಮೀಣ ಭಾರತ ಕಂಬಾರರಿಗೆ ತಾಯಿಯಾಗಿ ಕಂಡುಬರುತ್ತದೆ. ಈ ತಾಯಿಯ ಮೇಲೆ ನಿರ್ವೀರ್ಯ ನಾಯಕ ಆಕ್ರಮಣ ಮಾಡುತ್ತಿದ್ದಾನೆ. ಬಂದೂಕು ಠುಸ್ ಎನ್ನುವಂತೆ ಆತನೂ ಪ್ರಯೋಜನಕ್ಕೆ ಬಾರದವನು. ಕೇವಲ ತೋರಿಕೆಗೆ ಹೆಸರಾದವನು. ಗೌಡ ಇಲ್ಲಿ ಆಧುನಿಕತೆಯ ಸಂಕೇತ.

ಸಿ. ಬಸವಲಿಂಗಯ್ಯನವರು ಒಮ್ಮೆ ತಮ್ಮ ಭಾಷಣದಲ್ಲಿ ಕಂಬಾರರ ನಾಟಕಗಳನ್ನು ಕುರಿತು ಹೀಗೆ ಹೇಳುತ್ತಾರೆ. "ಕಂಬಾರರ ನಾಟಕಗಳಲ್ಲಿ ಒಂದು

ರೀತಿಯ ದ್ವಂದ್ವಗಳಿವೆ. ಗ್ರಾಮೀಣ ಪರಿಸರದ ಪಾಳೇಗಾರಿ ಮೌಲ್ಯ ಬಿಡೋಕಾಗಲ್ಲ. ಅದರ ಧಿರಿಸು ಬೇಕು ಅವರಿಗೆ. ಆದ್ರೆ ಆ ಪಾಳೇಗಾರ ಕಲೋನಿಯಲ್ ರಾಜಕೀಯದ ಪ್ರಭುತ್ವ ವರ್ಗದವ. ಏನೂ ಮಾಡಕಾಗಲ್ಲ ಅವನಿಗೆ, ಅವನು ಯಾವಾಗಲೂ ಚಿಂತನೆ ಮಾಡೋದು ಯಾರೆಲ್ಲ ಮೈನೆರೆದ ಹೆಣ್ಣು ಮಕ್ಕಳನ್ನು ಮುಟ್ಟಬೇಕು ಅಂತ."[5] ಗೌಡನ ವೇಷ ಧರಿಸಿ ರಾಕ್ಷಸ ಊರು ಸೇರುವುದು ಹೊರಗಿನ ಶಕ್ತಿ ದೇಸಿಯತೆಯ ವೇಷತೊಟ್ಟು ಸಂಸ್ಕೃತಿಯ ನಾಶಕ್ಕೆ ಕಾರಣವಾಗುವುದನ್ನು ಗುರುತಿಸಬಹುದು. ಗೌಡ್ತಿಗೆ ಬೀಳುವ ಕೆಟ್ಟ ಕನಸು ಮರುದಿನ ವಾಸ್ತವದಲ್ಲಿ ನಿಜವಾಗುವಾಗುತ್ತದೆ. ಪಾರೆಂಬಿ ಕರ್ರೆವ್ವನನ್ನು ನಿರ್ಲಕ್ಷಿಸಿದರೆ ದುರಂತ ಸಂಭವಿಸುತ್ತದೆ. ಎನ್ನುವಂತ, ಆರತಿ ಮಾಡುವಾಗ ದೀಪ ಕೆಟ್ಟು ಹೋದರೆ, ಹದ್ದು ಹಾರಾಡಿದರೆ, ತಾಯಿ ವಾಕ್ಯ ನೀಡದಿದ್ದರೆ, ಉಲ್ಕೆ ಬಿದ್ದರೆ ಅನಾಹುತ ಸಂಭವಿಸುತ್ತದೆ ಎಂಬಂಥ ನಂಬಿಕೆಗಳ ವಿವರಗಳು ದೇಸೀಯತೆಯ ಸತ್ವವನ್ನು ತೋರುತ್ತವೆ. ಹಾಗೆಯೆ ದುರುಗವ್ವ, ಲಗುಮವ್ವ, ಗ್ರಾಮದೇವತೆಗಳ ಕಣಿ ಕೇಳುವುದು, ಯಕ್ಷಿಣಿಯರು ಪ್ರತ್ಯಕ್ಷವಾಗಿ ರತ್ನ ಕೊಡುವುದು. ಗಾದೆ, ಒಗಟು, ನುಡಿಗಟ್ಟು, ಮದುವೆ, ಹಳ್ಳಿಯ ವರ್ಣನೆ, ಕತೆ, ಉಡುಗೆ–ತೊಡುಗೆ ಇವೆಲ್ಲವುಗಳ ವಿವರವೂ ಜನಪದ ತಂತ್ರದ ಬಳಕೆಯಲ್ಲಿ ಬಹಳ ಮುಖ್ಯ.

ತುಕ್ರನ ಕನಸಿನಲ್ಲಿ ತುಕ್ರ ತನ್ನ ಅಸ್ತಿತ್ವದ ಉಳಿವಿಗಾಗಿ ಹೋರಾಡಲು ಅವನಲ್ಲಿ ಈ ನಾಡು ಪರಂಪರೆಯಿಂದ ಉಳಿಸಿಕೊಂಡು ಬಂದ ಒಂದು ಸತ್ವ ಅಡಗಿದೆ. ಹಾಗಾಗಿಯೇ ಆತ ಎಲ್ಲರನ್ನು ಎಲ್ಲವನ್ನು ಎದುರಿಸುತ್ತಾನೆ. ಏಟು ತಿಂದರು ಮತ್ತೆ ಮತ್ತೆ ಎದ್ದು ನಿಲ್ಲುತ್ತಾನೆ. ಗೋರಿಯೊಳಗಿಂದಲೂ ಎದ್ದು ಬರುತ್ತಾನೆ. ಭವಿಷ್ಯವನ್ನು ಸುಂದರವಾಗಿಸಿಕೊಳ್ಳುವುದಕ್ಕಾಗಿ ನಗರಕ್ಕೆ ಬರುತ್ತಾನೆ. ಆಧುನಿಕತೆಯನ್ನು ಅಳವಡಿಸಿಕೊಳ್ಳುತ್ತಾನೆ. ಆದರೆ ಅದು ಎಷ್ಟು ಅಪಾಯಕಾರಿ ಎಂಬುದನ್ನು ಅವನ ಸಾವಿನ ರೀತಿ (ಗಲ್ಲುಶಿಕ್ಷೆ) ಮನದಟ್ಟು ಮಾಡಿಕೊಡುತ್ತದೆ. "ಸಿರಿಸಂಪಿಗೆಯಲ್ಲಿ ಶಿವನಾಗದೇವ ತನ್ನನ್ನೇ ಮೋಹಿಸಿಕೊಳ್ಳುವ ರಾಜಕುಮಾರ ದೀಪದ ಮೊಲ್ಲೆಯನ್ನು ಪ್ರೀತಿಸುವ ಆತ ಆಳದಲ್ಲಿ ತನ್ನ ಚೈತನ್ಯವನ್ನೇ ಪ್ರೀತಿಸುತ್ತಾನೆ. ಆತನ ಹುಡುಕಾಟ ಆತನ ಚೈತನ್ಯದ ಹುಡುಕಾಟವೇ ಆಗಿದೆ. ಮನಸ್ಸಿನ ಮೂಲಕ ದೇಹವನ್ನು, ದೇಹದ ಮೂಲಕ ಮನಸ್ಸನ್ನು ತಿಳಿಯಲು ಆತ ಯತ್ನಿಸುತ್ತಾನೆ. ಈ ಅನ್ವೇಷಣೆ ದುರಂತದಲ್ಲಿ ಕೊನೆಯಾಗುತ್ತದೆ. ಅಂದರೆ ಕ್ರಾಂತಿಯ ವಿಫಲತೆಯನ್ನು ಸಾರುವುದೇ ನಾಟಕದ ಉದ್ದೇಶ. ಋಷ್ಯಶೃಂಗದಲ್ಲಿಯೂ ಧಾರುಣವಾದ ಅರ್ಥಹೀನತೆ ಮಡುಗಟ್ಟಿದೆ. ಜೀವನದ ಮೌಲ್ಯಗಳ ಅವ್ಯವಸ್ಥೆ, ಶ್ರದ್ಧೆಯ ಅಭಾವ, ಬದುಕಿನ ಬಂಜೆತನ, ಸಂಬಂಧಗಳ ವಿಚ್ಛೇದ ಈ ಸ್ಥಿತಿ ಕೊನೆಯವರೆಗೂ ಅನಿವಾರ್ಯವೇ ಎಂಬ

ಪ್ರಶ್ನೆಯನ್ನು ಅವರ ಸಾಹಿತ್ಯ ನಮ್ಮನ್ನು ಕೇಳುತ್ತದೆ."[6] ರಾಕ್ಷಸ ಊರಗೌಡನಂತೆ ವೇಷಧರಿಸಿ ಬರುವುದು, ಬಾಳಗೊಂಡನಿಗೆ ಯಕ್ಷಿಣಿಯರು ದರ್ಶನನೀಡಿ ದಿವ್ಯಮಣಿಯನ್ನು ಕೊಡುವುದು. ಆ ಮಣಿಯನ್ನು ಧರಿಸಿ ಸಮೃದ್ಧ ಹೆಣ್ಣನ್ನು ಭೋಗಿಸಿದರೆ ಮಳೆ ಬರುತ್ತದೆ ಎಂಬ ನಂಬಿಕೆಗಳು ಜನಪದೀಯವಾದುವಾಗಿವೆ. ಜೋಕುಮಾರಸ್ವಾಮಿಯೂ ದುರಂತದಲ್ಲಿಯೇ ಕೊನೆಗೊಳ್ಳುತ್ತದೆ. 'ನೆತ್ತರು ಹ ರಿದಾವೋ ಹೊಳಿ ಹಳ್ಳತುಂಬ'. 'ಹುಲಿಯನೆರಳಿ'ನಲ್ಲಿ ರಾಕ್ಷಸ ಮನುಷ್ಯನ ವೇಷಧರಿಸಿ ಗೌಡನಾಗಿ ಬರುವುದು ನಾಗರೀಕತೆ ವೇಷ ಮರೆಸಿಕೊಂಡು ಬರುವುದನ್ನು ಸಂಕೇತಿಸುತ್ತದೆ. ಬಂದವನೆ ಊರ ಹಳೆಯ ಅರಳಿಮರವನ್ನು ಕಡಿಸಿಹಾಕುತ್ತಾನೆ. ಅಂದರೆ ಇದು ದೇಸಿಯತೆಯನ್ನು, ಗ್ರಾಮೀಣ ಜನಪದರ ಮುಗ್ಧತೆಯನ್ನು ನಾಶ ಮಾಡುವುದರ ಸಂಕೇತ. ಇದನ್ನು ನಾಟಕ ವಿರೋಧಿಸುತ್ತದೆ. ವಿರೋಧಿಸಿದರು ಕೊನೆಗೆ ಗೆಲ್ಲಿವುದು ರಾಕ್ಷಸನೇ. ಆಧುನಿಕತೆಯನ್ನು ವಿರೋಧಿಸುತ್ತಲೇ ಅದರಲ್ಲಿ ಒಂದಾಗುವ, ಒಪ್ಪಿಕೊಳ್ಳುವ ಪ್ರಕ್ರಿಯೆಯನ್ನು ಇದು ತಿಳಿಸುತ್ತದೆ. ಆಧುನಿಕ ಮಾನವ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿದ್ದುಕೊಂಡು, ತನ್ನ ನೆಲದ ಸಂಸ್ಕೃತಿಗೆ ಬದ್ಧನಾಗಿರುವಂತೆ ತೋರಿಸಿಕೊಳ್ಳುವ ಹಾಗೆ ವಸಾಹತೀಕರಣವನ್ನು ವಿರೋಧಿಸುತ್ತಲೇ ಅದನ್ನು ಒಪ್ಪಿಕೊಂಡು ಪರಂಪರಾಗತ ಸಂಸ್ಕೃತಿಯೇ ಶ್ರೇಷ್ಠ ಎಂದು ಹೊಗಳುವ, ವೇಷ ತೊಡುವ ಪ್ರಯತ್ನವನ್ನು ಈ ಜಾನಪದ ತಂತ್ರ ಪ್ರತಿಬಿಂಬಿಸುತ್ತದೆ. ನಗರವಾಸಿಗಳು ಜನಪದವನ್ನು ಕುರಿತು ಸಂಭ್ರಮಪಡುವ ಅದನ್ನು ತನಗೆ ಬೇಕಾದ ಹಾಗೆ ಬಳಸಿಕೊಳ್ಳುವ ಕಲೆಯನ್ನು ಕುರಿತು ಹೇಳುತ್ತಾ ಇದು ವಸಾಹತು ಶಿಕ್ಷಣದ ಪ್ರಭಾವವೆನ್ನುತ್ತಾರೆ ಪುರುಷೋತ್ತಮ ಬಿಳಿಮಲೆಯವರು. ವಸಾಹತು ವಿರೋಧವೆಂಬಂತೆ ಮೇಲ್ನೋಟಕ್ಕೆ ಕಂಡುಬಂದರು ಇದು ಅದರ ಮೌಲ್ಯಗಳನ್ನು ಬಲಪಡಿಸುವ ದೇಸೀಯ ಸಾಮಾಗ್ರಿ ಆಗಿದೆ ಎನ್ನುತ್ತಾರೆ. ಭೂತವಾಗಿರುವ ಅಪ್ಪ ಮಗನಿಗೆ ಸಂದೇಶ ಕೊಡುವುದು, ಮೂಡಲ ದಿಕ್ಕಿನ ಸಾಧು ಶರಣನು ಕೊಡುವ ಮಂತ್ರಜಲ ಮುಂತಾದವೆಲ್ಲವೂ ನಂಬಿಕೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕಲ್ಪನೆಗಳೇ ಆಗಿವೆ. ನಾಯಕ ದೈವ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸುವುದು, ಹಲವಾರು ಕಷ್ಟಗಳನ್ನು ದಾಟಿ ಜಯಗಳಿಸುವುದು ಜನಪದ ಮಾದರಿ.

ಭಾಷೆಯ ದೃಷ್ಟಿಯಿಂದಲೂ ದೇಸಿ ಭಾಷೆಯನ್ನೇ ಬಳಸಿರುವುದು ಕಂಬಾರರ ಮತ್ತೊಂದು ವೈಶಿಷ್ಟ್ಯ. ಕಂಬಾರರು ಜಾನಪದ ಭಾಷೆಗೆ ಅಂತರರಾಷ್ಟ್ರೀಯ ಸ್ಥಾನಮಾನ ದೊರಕಿಸಿಕೊಟ್ಟರು. ಉತ್ತರ ಕರ್ನಾಟಕದ ಆಡು ಮಾತಿನ ಶೈಲಿಯನ್ನೇ ತಮ್ಮ ಬಹುಪಾಲು ನಾಟಕಗಳಲ್ಲಿ ಬಳಸಿಕೊಂಡಿದ್ದಾರೆ. ಜನಪದರ ಬದುಕಿನ ಉತ್ಸಾಹವನ್ನು ಎತ್ತಿಹಿಡಿದಿದ್ದಾರೆ. ಅಲ್ಲದೆ ಲಾವಣಿ, ಗೀಗೀಪದ ಮುಂತಾದ ಸಂಗೀತದ

ಲಯಗತಿಗಳನ್ನು ಬಳಸಿಕೊಂಡಿದ್ದಾರೆ. ‘ಹುಲಿಯನೆರಳು’, ‘ಜೋಕುಮಾರಸ್ವಾಮಿ’, ‘ಸಿರಿಸಂಪಿಗೆ’, ‘ಮಹಾಮಾಯಿ’ಯಂಥ ನಾಟಕಗಳು ಜನಪದ ವಸ್ತು, ತಂತ್ರ, ಶೈಲಿಗಳನ್ನೇ ಸಂಪೂರ್ಣವಾಗಿ ಒಳಗೊಂಡಿವೆ. ‘ಋಷ್ಯಶೃಂಗ’ದಲ್ಲಿ ಮೊದಲಿಗೆ ಬರೋ ಗಣ್ಣಪದ, ಸೂತ್ರದಾರ ನಾಟಕದ ಕತೆಯನ್ನು ಪರಿಚಯಿಸುವ ರೀತಿ, ಹಿಮ್ಮೇಳದವರ ಮಾತುಗಳು ಹಾಗೂ ಕಮಲಿ ಹಾಡುವ ಹಾಡುಗಳಲ್ಲಿ ಜನಪದದ ಸತ್ವ, ಉತ್ಸಾಹ ತುಂಬಿ ತುಳುಕಿದೆ. ಹಾಗೆ ನಾಯಿಕತೆಯಲ್ಲಿ ಮೇಳಗಳಹಾಡು, ಕಾಡುಕುದುರೆಯಲ್ಲಿ ಕೋಮಾಲಿ ಹೇಳುವ “ನನಗೆ ಆಕಳು ಬೇಡವೋ ಹೋ ರಿಬೇಕು ಹೋರಿ!, ಕಾಡುಕುದರಿ ಹಾಂಗಲ್ಲನೋಡು ದಿನ ಪಳಗಿಸಬೇಕು”, ಇಂತ ಲೈಂಗಿಕ ಪ್ರತಿಮೆಗಳು ಹಾಗೂ ಗೌಡ್ತಿಯ ಮಾತುಗಳು, ‘ಕಣ್ಣಿನಾಗ ಸಣ್ಣಖಡ್ಗ ಆಸುಪಾಸು ಝಳಪಿಸಿತ್ತ ಬೆನ್ನುಹುರಿ ಬಗಿದಿತ್ತಣ್ಣ ಸೊಂಟದ ಬುಗುರಿ ತಿರುಗುತ್ತಿತ್ತ’ ಇಂತಹ ಹಾಡುಗಳು. ಜೋಕುಮಾರಸ್ವಾಮಿಯಲ್ಲಿ ಬರುವ ಜೋಕುಮಾರನ ಪೂಜೆ, ನಂಬಿಕೆ, ಆಚರಣೆಗಳು, ಹಾಡುಗಳು. ಸಿರಿಸಂಪಿಗೆಯ ಭಾಗವತ, ಅವಳಿ ಜವಳಿ. ‘ಜೈಸಿದನಾಯ್ಕ’, ‘ಹರಕೆಯಕುರಿ’, ‘ಸಾಂಬಶಿವ ಪ್ರಹಸನ’ ಇವುಗಳ ಭಾಷೆ ಮತ್ತು ಶೈಲಿ ಜನಪದವಾದರೂ ವಸ್ತುಮಾತ್ರ ರಾಜಕೀಯಕ್ಕೆ ಸಂಬಂಧಿಸಿದ್ದಾಗಿದೆ. ವಸ್ತು ಯಾವುದೇ ಇದ್ದರೂ ಅಲ್ಲಿಯ ಲಯಗಾರಿಕೆಯಲ್ಲಿ ನಾವು ಮಣ್ಣಿನ ಗುಣವನ್ನು ಕಾಣಬಹುದಾಗಿದೆ. ಮಹಾಮಾಯಿಯಲ್ಲಿ ಬರುವ ತಾಯಿ ಮಗನ ಸಂಭಾಷಣೆ ಗ್ರಾಮ್ಯ ಬದುಕಿನ ಕನ್ನಡಿಯಂತಿದೆ.

**ಮುದುಕಿ:** ಲೋ ಮಗ ಹ್ಯಾಗೆ ಹೇಳಲೋ ನಿನಗೆ? ಇದಕ್ಕಾಗಿ ನೀನು ದಂಡತೆರಬೇಕಾಗುತ್ತದೆ ನೆನಪಿರಲಿ.”(ಪು.28)

**ಸಂಜೀವಶಿವ:** “ನಿನ್ನ ಮಾರ್ಗದರ್ಶನ ಪಡೆಯದೆ ರಾಜಕುಮಾರಿಗೆ ಮದ್ದು ಕೊಟ್ಟುದಕ್ಕೆ ಕೋಪವೆ ತಾಯಿ?”

**ತಾಯಿ:** “ಹಿಂದೆ ಸಣ್ಣವನಿದ್ದಾಗ ಹೇಳಿದ ಹಿತನುಡಿಗಳ ಪಾಲಿಸುತ್ತಿದ್ದೆ. ಈಗ ದೊಡ್ಡವನಾಗಿದ್ದೀಯಪ್ಪ ತಾಯಿಯ ಕೀಳೆನಿಸಿ ಅವಳ ಕಟ್ಟಳೆಗಳ ಕಡೆಗಣಿಸಿ ಸಂಭ್ರಮಿಸಬಲ್ಲೆ. ಯಶಸ್ಸಿನ ಅಹಂಕಾರಗಳನ್ನು ಮೈತುಂಬ ಸುತ್ತಿಕೊಂಡ ನಿನಗೆ ಮುದಿ ತಾಯಿಯ ಅಗತ್ಯವೇನಿದೆ?”(ಪು.32)

**ಸಂಜೀವಶಿವ:** ಅಕಾಲದಲ್ಲಿ ಒಬ್ಬರ ಜೀವಹೋಗಬಾರದೆಂಬುದೇ ನನ್ನ ಕಾಳಜಿ. ಅದೇ ಪ್ರೇರಣೆಯಾಗಿ ನಿನ್ನ ಅಪ್ಪಣೆಯಿಲ್ಲದೆ ರಾಜಕುಮಾರಿಗೆ ಮದ್ದುಕೊಟ್ಟೆ.”

**ತಾಯಿ:** “ಅಗಾಧವಾದ ಶಕ್ತಿಕೊಟ್ಟಿದ್ದಾಳೆ ಅವಳು ಮೊದಲಾದರೆ ಒಂದು ಸಣ್ಣ

ರೋಗದ ಜೊತೆ ಜಗಳವಾಡಲೂ ನಿನಗೆ ನಿನ್ನ ತಾಯಿಯ ಸಹಾಯಬೇಕಿತ್ತು. ಈಗ ಅವಳನ್ನು ನೋಡಿದ ಮೇಲೆ ನನ್ನ ಜೊತೆಗೇ ಜಗಳವಾಡುವ ಶಕ್ತಿ ಬಂದಿದೆ!"(ಪು.35)

**ತಾಯಿ:** "ನಿನ್ನನ್ನ ಈತನಕ ರಕ್ಷಣೆಮಾಡಿದ ತಾಯಿ ಇವತ್ತು ನೀನು ನೋಡಿದ ಆ ಹುಡುಗಿಗಿಂತ ಕಡಿಮೆಯೆಂದು ಒಮ್ಮೆ ಹೇಳಿಬಿಡು ತೀರ್ಮಾನವಾಗಿ ಬಿಡಲಿ."(ಪು.35)

ಜೈಸಿದನಾಯ್ಕದಲ್ಲಿ ವಾತಾವರಣ ಸೃಷ್ಟಿಗಾಗಿ ಜನಪದವನ್ನು ಬಳಸಲಾಗಿದೆ. ಜನಪದದ ಬಳಕೆಯ ತಂತ್ರ ಕಂಬಾರರ ನಾಟಕಗಳಿಗೆ ಹೊಸತನವನ್ನು ತಂದು ಕೊಟ್ಟಿತು. ಆದರೆ ಈ ತಂತ್ರ ಉದ್ದೇಶ ಪೂರ್ವಕವಾದುದಾಗಿರದೆ, ಅದು ಅವರ ಚಿಂತನೆಯ ಹಾಗೂ ಬರವಣಿಗೆಯ ಒಂದು ಭಾಗವಾಗಿದೆ. ಪಶ್ಚಿಮದ ಆಕ್ರಮಣವನ್ನು ವಿರೋಧಿಸುವ ಸಲುವಾಗಿ ದೇಸಿ ಸಂರಚನೆಯನ್ನು ಅದರ ಎದುರು ಇಟ್ಟು ಸವಾಲು ಹಾಕುವ ಕೆಲಸವನ್ನು ಕಂಬಾರರು ಮಾಡಿದರು. ತಮ್ಮ ಸುತ್ತಮುತ್ತ ತಾವು ನೋಡ್ತಾ ಇರುವ ಜನಜೀವನದ ದಿನಚರಿಯನ್ನೇ ಕೇಂದ್ರವಾಗಿಟ್ಟುಕೊಂಡು ಅದರ ಮೂಲಕ ಮತ್ತೊಂದು ವಿಷಯವನ್ನು ಹೇಳುವ ಅರ್ಥೈಸುವ ಕೆಲಸ ಮಾಡುತ್ತಾರೆ. ಉತ್ತರ ಕರ್ನಾಟಕದ ಜನಪದ ಆಚರಣೆಯಲ್ಲಿ ಕೆಳವರ್ಗದ ದೈವವಾದ ಜೋಕುಮಾರ ಫಲಶಕ್ತಿಯ ಸಂಕೇತ ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕೊಡುವ, ಭೂಮಿಯನ್ನೂ ಫಲವತ್ತಾಗಿಸುವ ದೈವ. ನಾಟಕದಲ್ಲಿ ಬಸಣ್ಯಾ, ಜೋಕುಮಾರನಾಗಿ ಮೂಡಿ ಬಂದಿದ್ದಾನೆ. ಈತ ಫಲಶಕ್ತಿಯ ಸಂಕೇತ. ಮಕ್ಕಳಿಲ್ಲದ ಗೌಡ್ತಿಯ ಬಂಜೆತನವನ್ನು ನೀಗಿಸುವವನು ಇವನೇ. ಗೌಡ್ತಿ ಜೋಕುಮಾರನ ಪೂಜೆಮಾಡಿದ್ದರ ಫಲವಾಗಿಯೇ ಬಸಣ್ಯಾನನ್ನು ಕೂಡುತ್ತಾಳೆ. ಜೋಕುಮಾರಸ್ವಾಮಿಗೆ ಹೇಗೆ ಸಾವಿಲ್ಲವೋ ಹಾಗೆಯೇ ಬಸಣ್ಯಾನಿಗೂ ಸಾವಿಲ್ಲ. ಜೋಕುಮಾರ ಪ್ರತಿವರ್ಷ ಹುಟ್ಟಿಬರುತ್ತಾನೆ. ಭೂಮಿಯನ್ನು ಫಲವತ್ತಾಗಿಸುತ್ತಾನೆ. ಹಾಗೆಯೆ ಅವನ ರಕ್ತ ಚೆಲ್ಲಿದಲ್ಲೆಲ್ಲಾ ಭೂಮಿ ಫಲವತ್ತಾಗುತ್ತದೆ. ಬಸಣ್ಯಾ ಗೌಡ್ತಿಯ ಗರ್ಭದಲ್ಲಿರುವ ಭ್ರೂಣದ ಮೂಲಕ ಮತ್ತೆ ಹುಟ್ಟಿ ಬರುವ ಸೂಚನೆಯನ್ನು ನೀಡುವ ಮೂಲಕ ಅಮರನಾಗುತ್ತಾನೆ.

ಕಂಬಾರರು ಕೇವಲ ಜನಪದವನ್ನೇ ಮೈಗೂಡಿಸಿಕೊಂಡವರಲ್ಲ. ಕಂಬಾರರ ಮೇಲೆ ವಚನಕಾರರ ಪ್ರಭಾವವಿದೆ, ಬೇಂದ್ರೆ, ಮದುರಚೆನ್ನ ಮುಂತಾದ ಕವಿಗಳ ಪ್ರಭಾವವಿದೆ. ಈ ಎಲ್ಲಾ ಪ್ರಭಾವ ಪ್ರೇರಣೆಗಳಿಂದ ಜಾನಪದ ಮೊದಲುಗೊಂಡು ಆಧುನಿಕತೆಯನ್ನು ದಾಟಿ ಅಧ್ಯಾತ್ಮದ ಕಡೆಗೆ ಸಾಗುತ್ತಾರೆ. ಕಂಬಾರರ ಸಾಹಿತ್ಯದ ಮೂಲ ಎಳೆಗಳಿರುವುದೇ ಜಾನಪದದಲ್ಲಿ, ದೇಸಿಯತೆಯಲ್ಲಿ. ಇವನ್ನು ಅವರು

ಬಳಸಿಕೊಳ್ಳುವ ಉದ್ದೇಶ ನವನಾಗರಿಕತೆಯಲ್ಲಿ, ಸಮಕಾಲೀನತೆಯ ಸಂದರ್ಭದಲ್ಲಿ ಬದುಕನ್ನು ಹೊಸದೃಷ್ಟಿಯಲ್ಲಿ ಕಟ್ಟಿಕೊಳ್ಳುವ ಸಲುವಾಗಿ. ಕಂಬಾರರ ನಾಟಕಗಳಲ್ಲಿ ಜನಪದರ ಜೀವನೋತ್ಸಾಹವೇ ಹೆಚ್ಚಾಗಿ ತುಂಬಿಕೊಂಡಿದೆ. ಈ ಉತ್ಸಾಹ ಬದುಕಿನ ದುಃಖ ನೋವುಗಳೆಲ್ಲವನ್ನು ಮರೆಮಾಚುತ್ತದೆ. ಹಾಡು, ಕುಣಿತ, ಹಾದರ ಕೊಲೆಯಲ್ಲಿಯೂ ಉನ್ಮಾದವೇ ಮೆರೆದಿದೆ. ಕಂಬಾರರ ಒಟ್ಟು ಚಿಂತನೆ ನಗರಕೇಂದ್ರಿತ ನೆಲೆಗಳಿಂದ ಹೊರಟಿದೆ. ನಗರದಲ್ಲಿ ತಾವು ಏನನ್ನು ಕಂಡಿದ್ದಾರೋ ಅದನ್ನು ಹಳ್ಳಿಯ ಸಂವೇದನೆಯಲ್ಲಿ ಕಾಣುವ ಪ್ರಯತ್ನಮಾಡಿದ್ದಾರೆ. ಅಂ ದರೆ ಒಬ್ಬ ಆಧುನಿಕ ನಾಟಕಕಾರರಾಗಿ ತನ್ನ ಕಾಲದ ಸಂದರ್ಭ ಮತ್ತು ಜನ ರಿಗನುಗುಣವಾಗಿ ಜನಪದವನ್ನು ಅಗತ್ಯಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಂಡು ತನ್ನ ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ಆಧುನಿಕ ತುಡಿತದ ಮನಸುಗಳಿಗೆ ಜನಪದ ನೆಲೆಗಳನ್ನು ಪರಿಚಯಿಸುವ ಕಾರ್ಯ ಮಾಡುತ್ತಾರೆ. ಅಂದರೆ ಆಧುನಿಕ ನಗರ ಜೀವನದ ಹಿನ್ನೆಲೆಯಲ್ಲೇ ಜನಪದವನ್ನು ನೋಡುತ್ತಾರೆ. ಹೀಗೆ ಕಂಬಾರರ ನಾಟಕಗಳಲ್ಲಿ ಬಳಕೆಯಾಗಿರುವ ಜನಪದವು ಒಂದು ಭೋಗವಸ್ತುವಾಗುತ್ತದೆ, ಸರಕಾಗುತ್ತದೆ ಎಂಬ ಅಭಿಪ್ರಾಯವೂ ಇದೆ. ಅವರ ನಾಟಕಗಳಲ್ಲಿ ಜನಪದ ದಟ್ಟವಾಗಿ ಹರಡಿದ್ದರೂ ಸಂವೇದನೆ ಆಧುನಿಕವಾಗಿರುತ್ತದೆ.

"ಕಂಬಾರರ ವಂಶಿಕರಾದ ವಿಶ್ವಕರ್ಮರು ಕಬ್ಬಿಣವನ್ನೇ ಬಡಿದು ಉಪರಕಣಗಳನ್ನು ನೀಡಿದರಾದರೂ ವಸಾಹತುಶಾಹಿ ಶಿಕ್ಷಣದ ಪ್ರಭಾವಕ್ಕೊಳಗಾದ ಕಂಬಾರರು ಶಬ್ದಗಳನ್ನು ಬಡಿದು ಹೊಸದಾಗಿ ಟಂಕಿಸಿ ಹೊಸ ಕಾವ್ಯ ಪ್ರಪಂಚವನ್ನೇ ಸೃಷ್ಟಿ ಮಾಡಿದರು."[7] ಪಾಶ್ಚಾತ್ಯ ಆಲೋಚನೆಗಳನ್ನು ಇಟ್ಟುಕೊಂಡೇ ದೇಸಿಯತೆಯನ್ನು ಎತ್ತರಕ್ಕೆ ಏರಿಸಿದ್ದು ಕಂಬಾರರ ಹಿರಿಮೆ.

ಜನಪದವನ್ನು ನಮ್ಮ ಅವಶ್ಯಕತೆಗಳಿಗೆ ತಕ್ಕಂತೆ ಸೃಷ್ಟಿಸಿಕೊಳ್ಳಬೇಕು ಎಂಬ ನಿಲುವು ಕಂಬಾರರದು. ಆಯ್ಕೆಮಾಡಿಕೊಳ್ಳುವ ವಸ್ತುವಿಗೆ ತಕ್ಕಂತೆ ಭಾಷೆ, ಶೈಲಿ, ತಂತ್ರವನ್ನು ಬಳಸಿಕೊಳ್ಳುತ್ತಾರೆ. ನಾಟಕಗಳಲ್ಲಿ ಕಾವ್ಯಶೈಲಿ ಕಂಬಾರರ ವೈಶಿಷ್ಟ್ಯ.

ಗ್ರಾಮೀಣ ಸಂಸ್ಕೃತಿಯ ಉಳಿವಿಗಾಗಿ, ಬೆಳವಿಗಾಗಿ ಶ್ರಮಿಸಿದವರು ಕಂಬಾರರು, ಜಾಗತೀಕರಣ ಸಂಸ್ಕೃತಿಯ ಮೇಲೆ ಸವಾರಿ ಮಾಡುತ್ತವೆ ಎಂಬ ಆತಂಕ ಕಂಬಾರರಿಗೆ ಅಪಾರವಾಗಿದೆ. ಹೀಗೆ ಜಾಗತೀಕರಣ ಮುಂದುವರಿದರೆ ಮುಂದೆ ಜಾನಪದ ಎಂಬುದು ಇರುವುದಿಲ್ಲ ಎಂಬ ಅಂಜಿಕೆ ಕಾಳಜಿಯೂ ಅವರಲ್ಲಿದೆ. "ಅನುಭವಗಳನ್ನು ಅತ್ಯಂತ ಆಳವಾಗಿ ನೋಡೋದು ಮಿಥ್‌ನಿಂದ ಮಾತ್ರ ಸಾಧ್ಯ. ಅದು ಬೇರೆ ಸಾಧನಗಳಿಂದ ಸಾಧ್ಯವಿಲ್ಲ ಅನಿಸುತ್ತೆ.

ಮಿಥ್ ಬದುಕಿನ ಸಂಸ್ಕೃತಿಯ ಒಂದು ಭಾಗ. ಆದ್ದರಿಂದ ಬೇರೆ ಒಂದು ಪುರಾಣವನ್ನ, ಒಂದು ಮಿಥ್‌ನ್ನ ಮಾತಾಡಿಸುವುದು ಸಾಧ್ಯವಾದರೆ ಒಂದು ಸಂಸ್ಕೃತಿಯನ್ನು ಮಾತಾಡಿಸಿದಂತಾಗುತ್ತದೆ. ಆದ್ದರಿಂದ ಮಿಥ್ ಅಗತ್ಯ ಬೇಕಾಗಿದೆ."[8] "ನಾನು ಬಳಸುವುದು ಜನಪದ ಐತಿಹ್ಯಗಳಲ್ಲ. ಅವುಗಳನ್ನು ಬಳಸಿಕೊಂಡು ಹೊಸ ಐತಿಹ್ಯಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತೇನೆ."(ಅದೇ) "ನಮ್ಮ ಸಂಸ್ಕೃತಿಯಲ್ಲಿ ದುರಂತ ಕೊನೆಯಲ್ಲ. ಅದು ಹೊಸ ಸಂತೋಷಕ್ಕೆ ನಾಂದಿ. ನಮ್ಮಲ್ಲಿ ಬದುಕು ಮುಕ್ತಾಯಗೊಳ್ಳುವುದೇ ಇಲ್ಲ. ಮುಕ್ತಾಯದ ಹಂತಕ್ಕೆ ಬಂದಾಗಲೂ ಇಹದ ಆಚೆ ಏನಿದೆ ಎಂದು ತಿಳಿಯುವ ಕುತೂಹಲ."(ಅದೇ. ಪು.123) "ಜಡತ್ವ ಅಥವಾ ವೈಭೋಗ ಶ್ರಮಸಂಸ್ಕೃತಿಯ ಸ್ವಭಾವವಲ್ಲ."[9] ಎನ್ನುತ್ತಾರೆ.

ಜಾನಪದದ ಮೂಲತತ್ವಕ್ಕೆ ಧಕ್ಕೆಬಾರದ ಹಾಗೆ, ಸಮಕಾಲೀನತೆಗೆ ತಕ್ಕ ಹಾಗೆ ಜನಪದವನ್ನು ಬದಲಾಯಿಸಿಕೊಳ್ಳುವ ಪ್ರತಿಭೆ ಕಂಬಾರರಿಗೆ ವಿಶೇಷವಾಗಿ ಒಲಿದಿದೆ. ಭಾಷೆಯ ಬಳಕೆ ಕಂಬಾರರಿಗೆ ರಕ್ತಗತವಾಗಿ ಬಂದಿದೆ. ಕಂಬಾರರು ಭಾಷೆಗೆ ಸ್ವಶಕ್ತಿಯನ್ನು ಕೊಟ್ಟು ಅಭಿವ್ಯಕ್ತಿ ಸಾಮರ್ಥ್ಯವನ್ನು ತುಂಬುತ್ತಾರೆ. ಕಂಬಾರರ ದೇಸಿ ತಿಳುವಳಿಕೆ ಕೇವಲ ಬುದ್ಧಿಶಕ್ತಿಯ ಪ್ರದರ್ಶನಕ್ಕಾಗಿ ಬರುವುದಿಲ್ಲ. ಯಾವ ವಾಸ್ತವ ಕೃತಿಯೂ ತನ್ನ ಕಾಲ, ಸ್ಥಳಗಳ ಆವರಣದಲ್ಲಿ ಹುಟ್ಟಬೇಕಾದುದು ಅಗತ್ಯವಾಗಿದೆ ಎಂಬುದು ಕಂಬಾರರ ನಿಲುವು.

**ಕೊನೆ ಟಿಪ್ಪಣಿಗಳು:**


1. ಮರುಳಸಿದ್ಧಪ್ಪ ಕೆ. (2018). ಆಧುನಿಕ ಕನ್ನಡ ನಾಟಕ. ಅಂಕಿತ ಪುಸ್ತಕ. ಬೆಂಗಳೂರು. ಪು.ಸಂ. 342
2. ವೀರೇಶ ಬಡಿಗೇರ. (2011). ನಾಡೋಜ ಡಾ. ಚಂದ್ರಶೇಖರ ಕಂಬಾರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. 21
3. ವಿಕ್ರಮ್ ವಿಸಾಜಿ. (2001). ಕಂಬಾರರ ನಾಟಕಗಳು. ಇಳಾ ಮುದ್ರಣ. ಬೆಂಗಳೂರು. ಪು.ಸಂ. 54
4. ಮರುಳಸಿದ್ಧಪ್ಪ ಕೆ. (2018). ಆಧುನಿಕ ಕನ್ನಡ ನಾಟಕ. ಅಂಕಿತ ಪುಸ್ತಕ. ಬೆಂಗಳೂರು. ಪು.ಸಂ. 338
5. ವಿಕ್ರಮ್ ವಿಸಾಜಿ. (2001). ಕಂಬಾರರ ನಾಟಕಗಳು. ಇಳಾ ಮುದ್ರಣ. ಬೆಂಗಳೂರು. ಪು.ಸಂ. 60
6. ಪುರುಷೋತ್ತಮ ಬಿಳಿಮಲೆ. (1992). ಶಿಷ್ಟ ಪರಿಶಿಷ್ಟ. ಮದಿಪು ಪ್ರಕಾಶನ. ಮಂಗಳೂರು.

ಪು.ಸಂ. 201

7. ಜಯಪ್ರಕಾಶ್ ಮಾವಿನ ಕುಳಿ. (2004). ಶಿವಾಪುರ ಕಂಬಾರ ನಮಸ್ಕಾರ (ಅಭಿನಂದನಾ ಗ್ರಂಥ). ಚಂದದ್ರಶೇಖರ ಕಂಬಾರ ಅಭಿನಂದನಾ ಸಮಿತಿ. ಮೂಡಬಿದಿರೆ. ಪು.ಸಂ. 26
8. ಜಯಪ್ರಕಾಶ್ ಮಾವಿನ ಕುಳಿ. (2004). ಶಿವಾಪುರ ಕಂಬಾರ ನಮಸ್ಕಾರ (ಅಭಿನಂದನಾ ಗ್ರಂಥ). ಚಂದದ್ರಶೇಖರ ಕಂಬಾರ ಅಭಿನಂದನಾ ಸಮಿತಿ. ಮೂಡಬಿದಿರೆ. ಪು.ಸಂ. 101
9. ಜಯಪ್ರಕಾಶ್ ಮಾವಿನ ಕುಳಿ. (2004). ಶಿವಾಪುರ ಕಂಬಾರ ನಮಸ್ಕಾರ (ಅಭಿನಂದನಾ ಗ್ರಂಥ). ಚಂದದ್ರಶೇಖರ ಕಂಬಾರ ಅಭಿನಂದನಾ ಸಮಿತಿ. ಮೂಡಬಿದಿರೆ. ಪು.ಸಂ. 83

**ಪರಾಮರ್ಶನ ಗ್ರಂಥಗಳು:**

1. ಮರುಳಸಿದ್ಧಪ್ಪ ಕೆ. (2018). ಆಧುನಿಕ ಕನ್ನಡ ನಾಟಕ. ಅಂಕಿತ ಪುಸ್ತಕ. ಬೆಂಗಳೂರು.
2. ವಿಕ್ರಮ್ ವಿಸಾಜಿ. (2001). ಕಂಬಾರರ ನಾಟಕಗಳು. ಇಳಾ ಮುದ್ರಣ. ಬೆಂಗಳೂರು.
3. ಬಸವರಾಜಕಲ್ಗುಡಿ. (2012). ಕಂಬಾರರ ಸಾಹಿತ್ಯದ ನೆಲೆ–ಬೆಲೆ. ಅಂಕಿತ ಪುಸ್ತಕ. ಬೆಂಗಳೂರು.
4. ಪುರುಷೋತ್ತಮ ಬಿಳಿಮಲೆ. (1992). ಶಿಷ್ಟ ಪರಿಶಿಷ್ಟ. ಮದಿಪು ಪ್ರಕಾಶನ. ಮಂಗಳೂರು.
5. ವಸಂತಕುಮಾರ್ ಪೆರ್ಲ. (2008). ಸ್ವಾತಂತ್ರೋತ್ತರ ಕನ್ನಡ ನಾಟಕಗಳಲ್ಲಿ ಜಾನಪದ ಒಳನೋಟಗಳು. ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು.
6. ಜಯಪ್ರಕಾಶ್ ಮಾವಿನ ಕುಳಿ. (2004). ಶಿವಾಪುರ ಕಂಬಾರ ನಮಸ್ಕಾರ (ಅಭಿನಂದನಾ ಗ್ರಂಥ). ಚಂದದ್ರಶೇಖರ ಕಂಬಾರ ಅಭಿನಂದನಾ ಸಮಿತಿ. ಮೂಡಬಿದಿರೆ.
7. ವೀರೇಶ ಬಡಿಗೇರ. (2011). ನಾಡೋಜ ಡಾ. ಚಂದ್ರಶೇಖರ ಕಂಬಾರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.